ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು

**ಸಂಖ್ಯೆ:ಸಿ.ಎಸ್1/ ಗ.ಶಾ/ಎಸ್.ಎಸ್.ಎಲ್.ಸಿ/ವ.ಕಾ.ಕೇ.ಬ/02/2020-21** **ದಿನಾಂಕ: 21/06/2021**

**- ಸುತ್ತೋಲೆ -**

**ವಿಷಯ :** ಎಸ್.ಎಸ್.ಎಲ್.ಸಿ 2021ರ ಮುಖ್ಯ ಪರೀಕ್ಷೆಯ ಮಕ್ಕಳ ಕೇಂದ್ರ ಬದಲಾವಣೆ ಮಾಹಿತಿಯನ್ನು ಇಂದೀಕರಿಸುವ ಬಗ್ಗೆ.

**ಉಲ್ಲೇಖ :** ಕರ್ನಾಟಕ ಸರ್ಕಾರದ ನಡವಳಿಗಳ ಆದೇಶ ಸಂಖ್ಯೆ:ಇಪಿ110 ಎಸ್‌ಎಲ್‌ಬಿ 2021, ಬೆಂಗಳೂರು, ದಿ:18-06-2021

*********

ಕೋವಿಡ್-19 ಹಿನ್ನಲೆಯಲ್ಲಿ ಎಸ್.ಎಸ್.ಎಲ್.ಸಿ 2021ರ ಮುಖ್ಯ ಪರೀಕ್ಷೆಯನ್ನು ಮುಂದೂಡಿರುವುದರಿಂದ ಮುಂದಿನ ದಿನಗಳಲ್ಲಿ ಪರೀಕ್ಷೆಯನ್ನು ನಡೆಸಲು ಪೂರ್ವಸಿದ್ಧತೆ ಮಾಡಿಕೊಳ್ಳಲು ಉಲ್ಲೇಖದಲ್ಲಿ ಸೂಚಿಸಲಾಗಿದೆ.

ಕೋವಿಡ್-19 ಹಿನ್ನಲೆಯಲ್ಲಿ ವಲಸೆ ಕಾರ್ಮಿಕರು, ವಸತಿ ಶಾಲೆಯಲ್ಲಿದಂತಹ ವಿದ್ಯಾರ್ಥಿಗಳು ಹಾಗೂ ಹಾಸ್ಟೆಲ್‌ಗಳ ವಿದ್ಯಾರ್ಥಿಗಳು ತಮ್ಮ ಸ್ವಂತ ಊರುಗಳಿಗೆ ತೆರಳಿರುವುದು ಗಮನಕ್ಕೆ ಬಂದಿರುತ್ತದೆ. ಸದರಿ ಕಾರ್ಮಿಕರ ಮಕ್ಕಳು ಹಾಗೂ ವಸತಿ ಶಾಲೆಯಲ್ಲಿದ್ದಂತಹ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು, ತಾವು ಮರಳಿ ಹೋಗಿರುವ ಸ್ವಗ್ರಾಮ/ಪ್ರದೇಶದ ಹತ್ತಿರದ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಬೇಕಾಗಿರುತ್ತದೆ. ಇಂತಹ ವಿದ್ಯಾರ್ಥಿಗಳಿಗೆ ಆಯ್ಕೆ ಮಾಡಿಕೊಂಡಿರುವ ಕೇಂದ್ರದಲ್ಲಿ ಆಸನದ ಮತ್ತು ಪ್ರಶ್ನೆಪತ್ರಿಕೆಯ ವ್ಯವಸ್ಥೆ ಕಲ್ಪಿಸಬೇಕಾಗಿರುವುದರಿಂದ, ಈ ಮಾಹಿತಿಯನ್ನು ಪಡೆಯಲು ತಂತ್ರಾಂಶವನ್ನು ಸಿದ್ಧಪಡಿಸಲಾಗಿದೆ.

ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಮಾನ್ಯತೆ ಪಡೆದಿರುವ ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳ ಮುಖ್ಯ ಶಿಕ್ಷಕರು ಅವರ ಶಾಲೆಯಲ್ಲಿನ ವಲಸೆ ಕಾರ್ಮಿಕರ ಮಕ್ಕಳು ವಸತಿ ಶಾಲೆಗಳ ಹಾಗೂ ಹಾಸ್ಟೆಲ್‌ಗಳ ವಿದ್ಯಾರ್ಥಿಗಳನ್ನು(ಶಾಲಾ ಅಭ್ಯರ್ಥಿಗಳು/CCERF) ದೂರವಾಣಿ ಮೂಲಕ ಸಂಪರ್ಕಿಸಿ ಅವರು ಮೂಲ ಕೇಂದ್ರಗಳಲ್ಲಿ ಪರೀಕ್ಷೆ ಬರೆಯುವ ಬದಲಾಗಿ ತಮ್ಮ ಮೂಲ ಜಿಲ್ಲೆ/ತಾಲ್ಲೂಕಿನ ಯಾವ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ಇಚ್ಛಿಸಿದ್ದಾರೆ ಎನ್ನುವ ಮಾಹಿತಿ ಪಡೆದು ಶಾಲಾ ಲಾಗಿನ್‌ನಲ್ಲಿ ನಮೂದಿಸುವುದು.

1. ಮಂಡಳಿಯ ಜಾಲತಾಣ https://sslc.karnataka.gov.in/ ನ ಶಾಲಾ ಲಾಗಿನ್‌ನಲ್ಲಿ ತಂತ್ರಾಂಶ ಲಭ್ಯವಿದೆ.
2. ಈಗಾಗಲೇ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಂಡಿರುವ ತಂತ್ರಾಂಶದ ಯೂಸರ್‌ನೇಮ್ ಹಾಗೂ ಪಾಸ್‌ವರ್ಡ್‌ನ್ನು ಬಳಸಿ ಕೇಂದ್ರ ಬದಲಾವಣೆಯ ಮಾಹಿತಿಯನ್ನು ಕೀಲೀಕರಿಸಲು ಬಳಸುವುದು.
3. ಲಾಗಿನ್ ಆದ ನಂತರ ಮೊದಲು Reallocation of Centres for Migrants and Hostelites ಮೇಲೆ ಕ್ಲಿಕ್ ಮಾಡಬೇಕು. ತೆರೆಯಲಾಗುವ ವೆಬ್‌ಪೇಜ್‌ನ ಎಸ್.ಎ.ಟಿ.ಎಸ್ (SATS NUMBER) ಮೆನುವಿನ ಡ್ರಾಪ್ ಡೌನ್‌ನಲ್ಲಿ ವಿದ್ಯಾರ್ಥಿಯ ಎಸ್.ಎ.ಟಿ.ಎಸ್ (SATS NUMBER) ಮತ್ತು ವಿದ್ಯಾರ್ಥಿಯ ಹೆಸರನ್ನು ಆಯ್ಕೆ ಮಾಡಿಕೊಳ್ಳುವುದು. ಆಗ ವಿದ್ಯಾರ್ಥಿಯ ಮಾಹಿತಿಗಳು (Personal Details) ಹಾಗೂ ವಿದ್ಯಾರ್ಥಿಯ ಪ್ರಸ್ತುತ ಪರೀಕ್ಷಾ ಕೇಂದ್ರದ ವಿವರ Display ಆಗುತ್ತದೆ.
4. New Examination Centre Selection ಅಡಿಯಲ್ಲಿ ವಿದ್ಯಾರ್ಥಿ ಪರೀಕ್ಷೆ ಬರೆಯಲು ಇಚ್ಛಿಸುವ ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ.
5. ಜಿಲ್ಲಾ ಹೆಸರು, ತಾಲ್ಲೂಕು ಹೆಸರು ಆಯ್ಕೆ ಮಾಡಿಕೊಂಡಲ್ಲಿ, ಆ ತಾಲ್ಲೂಕಿನ ಕೇಂದ್ರ ಸಂಕೇತ ಮತ್ತು ಕೇಂದ್ರದ ಹೆಸರುಗಳು ಡ್ರಾಪ್ ಡೌನ್ ಮೆನುವಿನಲ್ಲಿ Display ಆಗುತ್ತವೆ. ವಿದ್ಯಾರ್ಥಿಯು ಇಚ್ಛಿಸುವ ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿಕೊಂಡ ನಂತರ ಕೇಂದ್ರದ ಸಾಮರ್ಥ್ಯ, ಆ ಕೇಂದ್ರಕ್ಕೆ ಹಂಚಿಕೆಯಾಗಿರುವ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಆ ಕೇಂದ್ರದಲ್ಲಿ ಲಭ್ಯವಿರುವ ಆಸನಗಳ ಸಂಖ್ಯೆ Display ಆಗುತ್ತದೆ.

6. ಆ ಪರೀಕ್ಷಾ ಕೇಂದ್ರದಲ್ಲಿ ಆಸನಗಳು ಲಭ್ಯವಿದ್ದಲ್ಲಿ, ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿಕೊಂಡು ಸೇವ್(SAVE) ಬಟನ್ ಮೇಲೆ ಕ್ಲಿಕ್ಕಿಸುವುದು. ಒಂದು ವೇಳೆ ಆಸನಗಳ ಸಂಖ್ಯೆ ಭರ್ತಿ ಆಗಿದ್ದಲ್ಲಿ, ವಿದ್ಯಾರ್ಥಿಯು ಸಮೀಪದ ಬೇರೆ ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿಕೊಳ್ಳಬೇಕಾಗಿರುತ್ತದೆ.
7. ವಿದ್ಯಾರ್ಥಿಯು ಹೊಸ ಕೇಂದ್ರವನ್ನು ಆಯ್ಕೆ ಮಾಡಿಕೊಂಡಲ್ಲಿ, ಮತ್ತೊಮ್ಮೆ ಬದಲಾವಣೆಗೆ ಅವಕಾಶವಿರುವುದಿಲ್ಲ ಹಾಗೂ ಹಳೇ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ಸಹ ಸಾಧ್ಯವಿರುವುದಿಲ್ಲ.
8. ಅಂತಿಮವಾಗಿ, ಹೊಸ ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿಕೊಂಡಿರುವ ವಿದ್ಯಾರ್ಥಿಗಳ ಪಟ್ಟಿಯನ್ನು ಮುಖ್ಯ ಶಿಕ್ಷಕರ ಲಾಗ್–ಇನ್ ನಲ್ಲಿ ನೀಡಲಾಗುವುದು. ಈ ಪಟ್ಟಿಯನ್ನು ಉಪಯೋಗಿಸಿ ಶಾಲೆಯಲ್ಲಿ ಎಷ್ಟು ವಿದ್ಯಾರ್ಥಿಗಳು ಹೊಸ ಪರೀಕ್ಷಾ ಕೇಂದ್ರ ಆಯ್ಕೆ ಮಾಡಿಕೊಂಡಿರುತ್ತಾರೆ ಎಂದು ಪರಿಶೀಲಿಸಿಕೊಳ್ಳಬಹುದಾಗಿದೆ.
9. ಅಭ್ಯರ್ಥಿಗಳು ಬದಲಾದ ಪರೀಕ್ಷಾ ಕೇಂದ್ರವು ನಮೂದಾಗಿರುವ ಪ್ರವೇಶ ಪತ್ರವನ್ನು ತಾವು ಅಭ್ಯಾಸ ಮಾಡಿದ ಶಾಲೆ/ಬದಲಾದ ಪರೀಕ್ಷಾ ಕೇಂದ್ರವಿರುವ ಬ್ಲಾಕ್‌ನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಪಡೆಯಬಹುದಾಗಿದೆ.

ಮೇಲ್ಕಂಡ ಮಾಹಿತಿಯು ಪರೀಕ್ಷೆ ನಡೆಸಲು ಅತ್ಯವಶ್ಯಕವಾಗಿರುವುದರಿಂದ, **ದಿ:25.06.2021** ರೊಳಗೆ ಆನ್‌ಲೈನ್‌ನಲ್ಲಿ ಮಾಹಿತಿಯನ್ನು ಕಡ್ಡಾಯವಾಗಿ ಕೀಯಿಂಗ್ ಮಾಡಲು ಮುಖ್ಯಶಿಕ್ಷಕರಿಗೆ ಸೂಚಿಸಿದೆ.

(ಸುಮಂಗಲ. ವಿ)
ನಿರ್ದೇಶಕರು, ಪರೀಕ್ಷೆಗಳು 21/6/21

ಅಗತ್ಯ ಕ್ರಮಕ್ಕಾಗಿ :

1) ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರುಗಳಿಗೆ
2) ರಾಜ್ಯದ ಎಲ್ಲಾ ಜಿಲ್ಲಾ ಎಸ್.ಎಸ್.ಎಲ್.ಸಿ, ನೋಡಲ್ ಅಧಿಕಾರಿಗಳು, ಉಪನಿರ್ದೇಶಕರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ
3) ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ
4) ರಾಜ್ಯದ ಎಲ್ಲಾ ಶಾಲೆಯ ಮುಖ್ಯಶಿಕ್ಷಕರುಗಳಿಗೆ